## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:-ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಬೆಂಗಳೂರು ಇಲ್ಲಿ ಹುದ್ದೆಯ ಸ್ಥಳಾಂತರದಿಂದ ಇ-ಆಡಳಿತ ಘಟಕ ಸ್ಥಾಪಿಸುವ ಬಗ್ಗೆ.

ಓದಲಾಗಿದೆ:-1.ಸರ್ಕಾರದ ಪತ್ರ ಸಂಖ್ಯೆ:ಇಡಿ:11:ಯೋಸಕ 2005:ದಿ.13.1.2005.

2.ಸರ್ಕಾರದ ಪತ್ರ ಸಂಖ್ಯೆ:ಇಡಿ:11:ಯೋಸಕ 2005:ದಿ.04.5.2005.

3.ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ರವರ ಅಧಿಕೃತ ಜ್ಞಾಪನ ಸಂಖ್ಯೆ:ಸಿ.1(4) ಇ.ಎಂ.ಐ. ಎಸ್.ಹು.ಸ್ಥಳಾಂತರ.01/2004-05/ದಿ.09.06.2005.

4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ: :ಸಿ.1(4) ಇ.ಎಂ.ಐ.ಎಸ್.ಹು.ಸ್ಥಳಾಂತರ.01/2004-05/ದಿ.01.09.2005.

****

ಪ್ರಸ್ತಾವನೆ:-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮೇಲೆ(1)ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಇ.ಎಂ.ಐ.ಎಸ್ ನ್ನು ಕಾರ್ಯಾಚರಣೆಗೆ ತರಲು ಸರ್ವ ಶಿಕ್ಷಣ ಅಭಿಯಾನದಡಿ ವೇತನ ಭರಿಸಲು ಯೋಜಿಸಿರುವಂತೆ ಆಯುಕ್ತರ ಕಛೇರಿ, ಬೆಂಗಳೂರು ಇಲ್ಲಿ ಇ-ಆಡಳಿತ ಘಟಕ ಸ್ಥಾಪಿಸಲು ನಿರ್ದೇಶನ ನೀಡಲಾಗಿತ್ತು. ಮೇಲೆ(2)ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ಹುದ್ದೆಗಳನ್ನು ಸ್ಥಳಾಂತರಿಸಿ ಸರ್ಕಾರಕ್ಕೆ ಯಾವುದೇ ಹೆಚ್ಚುವರಿ ಆರ್ಥಿಕ ಹೊರೆ ಬಾರದ ಹಾಗೆ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಲಾಗಿತ್ತು. ಅದರಂತೆ ಮೇಲೆ(3)ರಲ್ಲಿ ಓದಲಾದ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆರವರ ಅಧಿಕೃತ ಜ್ಞಾಪನ ಪತ್ರದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಕೆಲವು ಹುದ್ದೆಗಳನ್ನು[ಒಟ್ಟು 6] ಇ-ಆಡಳಿತ ಘಟಕ, ಆಯುಕ್ತರ ಕಛೇರಿ ಇಲ್ಲಿಗೆ ಸ್ಥಳಾಂತರಿಸಿ ಆದೇಶಿಸಲಾಗಿತ್ತು. ಮೇಲೆ(4)ರಲ್ಲಿ ಓದಲಾದ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರುರವರ ಪತ್ರದಲ್ಲಿ ದಿನಾಂಕ:09..06.2005ರ ಅಧಿಕೃತ ಜ್ಞಾಪನ ಪತ್ರದಲ್ಲಿ ಪ್ರಸ್ತಾಪಿಸಿರುವ ಪ್ರತಿ ಹುದ್ದೆಗಳನ್ನು ಸ್ಥಳಾಂತರಿಸಲು ಹಾಗೂ ಈ ಎಲ್ಲಾ ಹುದ್ದೆಗಳಿಗೂ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದ ಆಡಳಿತಾತ್ಮಕ ವೆಚ್ಚದಡಿಯಲ್ಲಿ ವೇತನ ಮತ್ತು ಭತ್ಯೆಗಳನ್ನು ಭರಿಸಲು ಸರ್ಕಾರದ ಆದೇಶವನ್ನು ಕೋರಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

### ಸರ್ಕಾರದ ಆದೇಶ ಸಂಖ್ಯೆ:ಇಡಿ:11:ಯೋಸಕ 2005:ಬೆಂಗಳೂರು,ದಿ.21.9.2005.

[ಇಡಿ: 46 :ಸ್ವೀಮರ (ಯುನಿಕ್) 2003.ದಿ.21.9.2005]

ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದಡಿಯ ಈ ಕೆಳಕಂಡ ಹುದ್ದೆಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಬೆಂಗಳೂರು ಇಲ್ಲಿ ಸ್ಥಾಪಿಸಿರುವ ಇ-ಆಡಳಿತ ಘಟಕಕ್ಕೆ ಸ್ಥಳಾಂತರಿಸಿ ಆದೇಶಿಸಿರುವ ಅಧಿಕೃತ ಜ್ಞಾಪಕಕ್ಕೆ, ಕೇಂದ್ರ ಸರ್ಕಾರದ, ಸರ್ವ ಶಿಕ್ಷಣ ಅಭಿಯಾನ ಯೋಜನಾ ಅನುದಾನ ಮಂಡಳಿ(ಪಿ.ಎ.ಬಿ)ಯ ಘಟನೋತ್ತರ ಅನುಮತಿ ಪಡೆಯುವ ಷರತ್ತನ್ನು ವಿಧಿಸಿ ಸರ್ಕಾರವು ಅನುಮತಿ ನೀಡಿದೆ.

| ಕ್ರ.ಸಂ | ಸ್ಥಳಾಂತರಿಸುತ್ತಿರುವ ಹುದ್ದೆ ಮತ್ತು ವಿಳಾಸ | ಸ್ಥಳಾಂತರದ ನಂತರ ಸೂಚಿಸಿರುವ ಹುದ್ದೆಯ ಹೆಸರು ಮತ್ತು ಸ್ಥಳ |
|---|---|---|
| 01. | ಶಿಕ್ಷಣಾಧಿಕಾರಿ, ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ (ಖಾಲಿ ಹುದ್ದೆ) | ಹಿರಿಯ ಸಹಾಯಕ ನಿರ್ದೇಶಕರು(ಇ.ಎಂ.ಐ.ಎಸ್), ಇ-ಗೌರ್ನೆನ್ಸ್ ಘಟಕ, ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು. |

| ಕ್ರ.ಸಂ | ಸ್ಥಳಾಂತರಿಸುತ್ತಿರುವ ಹುದ್ದೆ ಮತ್ತು ವಿಳಾಸ | ಸ್ಥಳಾಂತರದ ನಂತರ ಸೂಚಿಸಿರುವ ಹುದ್ದೆಯ ಹೆಸರು ಮತ್ತು ಸ್ಥಳ |
|---|---|---|
| 02. | ಸಹಾಯಕ ನಿರ್ದೇಶಕರು, ಅಕ್ಷರ ದಾಸೋಹ ಕಾರ್ಯಕ್ರಮ, ಕಾರ್ಯ ನಿರ್ವಹಣಾಧಿಕಾರಿಗಳ ಕಛೇರಿ, ತಾಲ್ಲೂಕು ಪಂಚಾಯತ್, ಯಳಂದೂರು, ಚಾಮರಾಜನಗರ ಜಿಲ್ಲೆ[ಖಾಲಿ ಹುದ್ದೆ] | ಸಹಾಯಕ ನಿರ್ದೇಶಕರು (ಇ.ಎಂ.ಐ.ಎಸ್), ಇ-ಗೌರ್ನೆನ್ಸ್ ಘಟಕ, ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು. |
| 03. | ಸಹಾಯಕ ಯೋಜನಾ ಸಮನ್ವಯಾಧಿಕಾರಿ, ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮ, ಜಿಲ್ಲಾ ಯೋಜನಾ ಕಛೇರಿ, ಮಡಿಕೇರಿ, ಕೊಡಗು ಜಿಲ್ಲೆ. (ಶ್ರೀಮತಿ ನಲ್ಲೇರಿ ಉಮೇಶ್ವರಿ ಇವರನ್ನು ಹುದ್ದೆ ಸಮೇತ ಸ್ಥಳಾಂತರಿಸಿದೆ) | ಸಹಾಯಕ ನಿರ್ದೇಶಕರು (ಇ.ಎಂ.ಐ.ಎಸ್), ಇ-ಗೌರ್ನೆನ್ಸ್ ಘಟಕ, ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು. |
| 04. | ಸಹಾಯಕ ಯೋಜನಾ ಸಮನ್ವಯಾಧಿಕಾರಿ, ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮ, ಜಿಲ್ಲಾ ಯೋಜನಾ ಕಛೇರಿ, ಧಾರವಾಡ (ಖಾಲಿ ಹುದ್ದೆ) | ಸಹಾಯಕ ನಿರ್ದೇಶಕರು (ಇ.ಎಂ.ಐ.ಎಸ್), ಇ-ಗೌರ್ನೆನ್ಸ್ ಘಟಕ, ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು. |
| 05. | ಸಹಾಯಕ ನಿರ್ದೇಶಕರು, ಅಕ್ಷರ ದಾಸೋಹ ಕಾರ್ಯಕ್ರಮ, ಕಾರ್ಯ ನಿರ್ವಹಣಾಧಿಕಾರಿಗಳ ಕಛೇರಿ, ತಾಲ್ಲೂಕು ಪಂಚಾಯತ್, ಧಾರವಾಡ, ಧಾರವಾಡ ಜಿಲ್ಲೆ. | ಸಹಾಯಕ ನಿರ್ದೇಶಕರು (ಇ.ಎಂ.ಐ.ಎಸ್), ಇ-ಗೌರ್ನೆನ್ಸ್ ಘಟಕ, ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು. |
| 06. | ಉಪಪ್ರಾಂಶುಪಾಲರು, ಸರ್ಕಾರಿ ಪದವೀ ಪೂರ್ವ ಕಾಲೇಜು, ಶಿವನಗರ, ಬೆಂಗಳೂರು ಉತ್ತರ ಜಿಲ್ಲೆ. ಬೆಂಗಳೂರು. (ಶ್ರೀಮತಿ ಹೆಚ್.ಜಿ. ಪಂಕಜ ರವರ ಹುದ್ದೆ ಸ್ಥಳಾಂತರಿಸಿದೆ) | ಸಹಾಯಕ ನಿರ್ದೇಶಕರು (ಇ.ಎಂ.ಐ.ಎಸ್), ಇ-ಗೌರ್ನೆನ್ಸ್ ಘಟಕ, ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು. |

ಮೇಲ್ಕಂಡಂತೆ ಸ್ಥಳಾಂತರಿಸಿದ ಹುದ್ದೆಗಳಿಗೆ ವೇತನ ಮತ್ತು ಇತರೆ ಭತ್ಯೆಗಳನ್ನು ಸರ್ವ ಶಿಕ್ಷಾ ಅಭಿಯಾನ ಕಾರ್ಯಕ್ರಮದ ರಾಜ್ಯ ಯೋಜನಾ ಕಛೇರಿಯ ಆಡಳಿತಾತ್ಮಕ ವೆಚ್ಚದಲ್ಲಿ ಭರಿಸತಕ್ಕದ್ದು.

ಸರ್ವ ಶಿಕ್ಷಾ ಅಭಿಯಾನ ಕಾರ್ಯಕ್ರಮ ಮುಕ್ತಾಯವಾದ ನಂತರ ಈ ಆದೇಶದಲ್ಲಿ ಸ್ಥಳಾಂತರಿಸಿದ ಮೇಲ್ಕಂಡ ಹುದ್ದೆಗಳನ್ನು ಮೂಲ/ಸ್ಥಳ/ಕಛೇರಿಗಳಿಗೆ ಆ ಸಂದರ್ಭದಲ್ಲಿ ಅಗತ್ಯವಿದ್ದಲ್ಲಿ ಪುನರ್ ಸ್ಥಾಪಿಸಲು ಸೂಕ್ತ ಸಮಯದಲ್ಲಿ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸುವುದು.

ಹೀಗೆ ಸ್ಥಳಾಂತರಗೊಂಡ ಮೇಲ್ಕಂಡ ಹುದ್ದೆಗಳ ಜಾಗವನ್ನು ಖಾಲಿ ಹುದ್ದೆಯೆಂದು ಭಾವಿಸಿ ಯಾವುದೇ ಕಾರಣಕ್ಕೂ ಭರ್ತಿ ಮಾಡತಕ್ಕದ್ದಲ್ಲ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ:ಎಫ್.ಡಿ:1:ಟಿ.ಎಫ್.ಸಿ 96:ದಿನಾಂಕ:10.07.1996 ರಲ್ಲಿ ಪ್ರಧಾನಕಾರ್ಯದರ್ಶಿ/ಕಾರ್ಯದರ್ಶಿರವರಿಗೆ ಪ್ರದತ್ತವಾದ ಆರ್ಥಿಕ ಅಧಿಕಾರದನ್ವಯ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ:ಇಡಿ:735:ಐಎಫ್(ಬಿಎ)2005:ದಿನಾಂಕ:21.09.20054ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ

(ಕೆ.ಶ್ರೀಕಂಠೇಶ್ವರ)
ವಿಶೇಷಾಧಿಕಾರಿಗಳು ಹಾಗೂ ಪದನಿಮಿತ್ತ
ಸರ್ಕಾರದ ಸಹಕಾರ್ಯದರ್ಶಿಗಳು
21.9.05 ಶಿಕ್ಷಣ ಇಲಾಖೆ.[ಯೋಜನೆ]

ಗೆ:-

01. ಮಹಾಲೇಖಪಾಲರು, ಕರ್ನಾಟಕ, (ಆಡಿಟ್ 1 ಮತ್ತು 2).
02. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
03. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಈಶಾನ್ಯ ವಲಯ ಗುಲ್ಬರ್ಗಾ,
04. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ,
05. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
06. ನಿರ್ದೇಶಕರು(ಪ್ರಾಥಮಿಕ), ನಿರ್ದೇಶಕರು(ಪ್ರೌಢ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
07. ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
08. ಖಜಾನೆ, ನಿರ್ದೇಶಕರು, ಪೋಡಿಯಂ ಬ್ಲಾಕ್, ಬೆಂಗಳೂರು.
09. ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
10. ಉಪನಿರ್ದೇಶಕರು, ನೆಟ್ ವರ್ಕ್ ಮ್ಯಾನೇಜ್ ಮೆಂಟ್ ಸೆಚಿಟರ್, ಖನಿಜ ಭವನ, ನಂ-9, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
11. ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ಉಪಕಾರ್ಯದರ್ಶಿಗಳು,ಶಿಕ್ಷಣಇಲಾಖೆ,ಬೆಂಗಳೂರು.
12. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
13. ಕಾರ್ಯದರ್ಶಿಗಳು,(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)ಶಿಕ್ಷಣ ಇಲಾಖೆ ರವರ ಆಪ್ತ ಸಹಾಯಕರು, ಬೆಂಗಳೂರು.
14. ಕಛೇರಿ ಪ್ರತಿ/ಹೆಚ್ಚುವರಿ ಪ್ರತಿಗಳು.